<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ದಕ್ಷಿಣ ಕನ್ನಡ, ಮಂಗಳೂರು</u>

<u>ಸೆಷನ್ಸ್ ಕೇಸ್ ನಂಬ್ರ 211/2023</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ | <u>ಪ್ರಾಸಾಃ 1</u> |
| ತಂದೆಯ ಹೆಸರು | : | ಪ್ರಭಾಕರ ಹೆಗ್ಡೆ | <u>ಚಾಸಾಃ 1</u> |
| ಪ್ರಾಯ | : | 48 ವರ್ಷ | ದಿನಾಂಕಃ 03.12.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಿವಿಲ್ ಗುತ್ತಿಗೆದಾರರು | |
| ವಾಸಸ್ಥಳ | : | ಮಹಾಲಕ್ಷ್ಮಿ ನಿವಾಸ, ಜೈನರಬಾಡಾರು, ಬಜಿರೆ ಗ್ರಾಮ, ಬೆಳ್ತಂಗಡಿ ತಾಲೂಕು. | |

<u>**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**</u>

ನಾನು ಕಳೆದ 2 ವರ್ಷಗಳಿಂದ ಬಜಿರೆ ಗ್ರಾಮದ ಬಾಡಾರು ಕೊರಗತಲ್ಲು ಸ್ವಾಮಿ ಕೊರಗಜ್ಜ ಸೇವಾ ಟ್ರಸ್ಟ್ ಇದರ ಅಧ್ಯಕ್ಷನಾಗಿದ್ದೇನೆ. ಬಜಿರೆ ಗ್ರಾಮದ ಗ್ರಾಮಸ್ಥರು ಕೊರಗತಲ್ಲು ಎಂಬಲ್ಲಿ ಕೊರಗಜ್ಜನ ಕಲ್ಲನ್ನು ಆರಾಧಿಸಿಕೊಂಡಿದ್ದು, ಅದಕ್ಕೆ ಸಂಬಂಧಿಸಿದ ಟ್ರಸ್ಟ ನ ಅಧ್ಯಕ್ಷನಾಗಿರುತ್ತೇನೆ. ಅಲ್ಲಿ ದೈವದ ಆರಾಧನೆಗಾಗಿ ತುಂಬಾ ಜನರು ಬರಲು ಪ್ರಾರಂಭಿಸಿದ್ದು, ಅಲ್ಲಿ ಅವ್ಯವಸ್ಥೆ ಆಗಬಾರದು ಅಂತ ಮತ್ತು ಬರುವಂತಹ ಭಕ್ತರಿಗೆ ಅನುಕೂಲವಾಗಲಿ ಅಂತ ಸದ್ರಿ ಟ್ರಸ್ಟನ್ನು ಆರಂಭಿಸಿರುತ್ತೇವೆ.

2. ಸದ್ರಿ ಕೊರಗಜ್ಜನ ಕಟ್ಟೆ ಇದು ಸರಕಾರಿ ಸ್ಥಳದಲ್ಲಿದ್ದ, ಅನಾದಿ ಕಾಲದಿಂದಲೂ ಭಕ್ತರು ಆರಾಧಿಸಿಕೊಂಡು ಬಂದಿರುತ್ತಾರೆ. ಅಲ್ಲಿ ಆರಾಧಿಸಿಕೊಂಡು ಬರುತ್ತಿದ್ದ ಕೊರಗಜ್ಜನ ಕಲ್ಲನ್ನು, ಆರೋಪಿಯ ಸಂಬಂಧಿಕರಾದ ಹರೀಶ್ ಮತ್ತು ಅವರ ಮನೆಯವರು, ಬೇರೆ ಕಡೆ ಸ್ಥಳಾಂತರಿಸಿ, ಅವರ ಸ್ವಂತಕ್ಕೆ ಪೂಜೆ ಮಾಡಿ ಆರಾಧಿಸಿಕೊಂಡು ಬರಲು, ಅವರ ಸ್ವಂತ ಸ್ಥಳ

ಅಂತ ಹೇಳಿದ್ದು, ಆದರೆ ಅದು ಸಹ ಸರಕಾರಿ ಸ್ಥಳವೇ ಆಗಿತ್ತು. ನಂತರ ನಾವು ಮೊದಲಿಗೆ ಆರಾಧಿಸುತ್ತಿದ್ದ ಸ್ಥಳದಲ್ಲಿಯೇ ಮತ್ತೊಂದು ಕೊರಗಜ್ಜನ ಕಲ್ಲನ್ನು ಸ್ಥಾಪಿಸಿ ಪೂಜೆಯನ್ನು ಮಾಡಿಕೊಂಡು ಬಂದಿರುತ್ತೇವೆ. ಕೊರಗಜ್ಜನ ಕಲ್ಲನ್ನು ಸ್ಥಳಾಂತರಿಸುವ ಕಾಲಕ್ಕೆ ಸ್ಲ್ಯಾಬನ್ನು ತುಂಡು ಮಾಡಿ ಹೋಗಿರುತ್ತಾರೆ, ಹಾಗಾಗಿ ನಾವು ತಾತ್ಕಾಲಿಕವಾಗಿ ಮರದ ಕಂಬಗಳನ್ನು ಹಾಕಿ, ತೆಂಗಿನ ಗರಿಗಳನ್ನು ಕಟ್ಟಿ, ಅದರ ಮೇಲೆ ಪ್ಲಾಸ್ಟಿಕ್ ಟಾರ್ಪಲ್ ಹಾಕಿ ಪೂಜೆ ಮಾಡುತ್ತಾ ಬಂದಿರುತ್ತೇವೆ.

3. ದಿನಾಂಕಃ 11.07.2023 ರಂದು ಬೆಳಿಗ್ಗೆ 10.30 ಗಂಟೆಗೆ ನನಗೆ ದೂರವಾಣಿ ಕರೆ ಒಂದು ಬಂದಿದ್ದು, ಕರೆ ಮಾಡಿದವರು ಆರೋಪಿ ನಾವು ಪೂಜೆ ಮಾಡಿಕೊಂಡು ಬರುತ್ತಿರುವ ಕೊರಗಜ್ಜನ ಕಟ್ಟೆಗೆ ಮೇಲ್ಛಾವಣಿಗೆ ಹಾಕಿರುವ ತೆಂಗಿನ ಗರಿ ಮತ್ತು ಪ್ಲಾಸ್ಟಿಕ್ ಗೆ ಬೆಂಕಿ ಹಚ್ಚಿದ್ದಾರೆ ಅಂತ ಚಾ.ಸಾ.3ರವರ ಗಂಡ ವಸಂತ ಎನ್ನುವವರು ನನಗೆ ತಿಳಿಸಿರುತ್ತಾರೆ. ನಂತರ ನಾನು ಸ್ಥಳಕ್ಕೆ ಹೋಗಿ ನೋಡಲಾಗಿ, ತೆಂಗಿನ ಗರಿ ಮತ್ತು ಟರ್ಪಾಲಿನ್ ಸುಟ್ಟು ಹೋಗಿತ್ತು. ನಂತರ ನಾನು ವೇಣೂರು ಪೊಲೀಸು ಠಾಣೆಗೆ ಹೋಗಿ ಮಧ್ಯಾಹ್ನ 3.30 ಗಂಟೆಗೆ ದೂರು ಕೊಟ್ಟಿರುತ್ತೇನೆ. ಸದ್ರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು.

4. ದೂರು ಕೊಟ್ಟ ಬಳಿಕ ಸ್ಥಳಕ್ಕೆ ಪೊಲೀಸರು ಬಂದಿದ್ದು, ನಾನು ಸ್ಥಳ ತೋರಿಸಿಕೊಟ್ಟ ಮೇರೆಗೆ ಸಂಜೆ 5.00 ರಿಂದ 6.00 ಗಂಟೆಯವರೆಗೆ ಪಂಚರಾದ ಚಾ.ಸಾ.6 ಮತ್ತು ಚಾ.ಸಾ.7ರವರ ಸಮಕ್ಷಮ ಪೊಲೀಸರು ಮಹಜರು ತಯಾರಿಸಿದ್ದು,

SC 211/2023 PW-1
Date: 22.03.2025

ಮಹಜರು ಕಾಲಕ್ಕೆ ಸ್ಥಳದ ಕರಡು ನಕಾಶೆಯನ್ನು ತಯಾರಿಸಿರುತ್ತಾರೆ. ಅಲ್ಲದೆ ಮಹಜರು ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತಾರೆ. ನಾನು ಈಗ ನೋಡುತ್ತಿರುವ ಮಹಜರನ್ನು ನಿ.ಪಿ.2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಕಾಶೆಯನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.3 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಮಹಜರು ತಯಾರಿಸುವ ಕಾಲಕ್ಕೆ ತೆಗೆದ ಒಂದು ಫೋಟೋ ವನ್ನು ಈಗ ನೋಡುತ್ತಿದ್ದು, ಸದ್ರಿ ಫೋಟೋವನ್ನು ಆರೋಪಿ ಪರ ವಕೀಲರ ತಕಾರಾರಿಗೆ ಒಳಪಟ್ಟು ನಿ.ಪಿ.4 ಎಂದು ಗುರುತಿಸಲಾಯಿತು.

5. ಘಟನೆ ನಡೆಯುವ ಸಮಯ ಚಾ.ಸಾ.2ರವರು ಅವರ ಮೊಬೈಲಿನಲ್ಲಿ ವೀಡಿಯೋ ಚಿತ್ರೀಕರಣ ಮಾಡಿದ್ದು, ಅದನ್ನು ನಾನು ಈ ಹಿಂದೆ ನೋಡಿದ್ದೇನೆ, ಅದನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಮುಂದುವರಿದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ ಕಾರಣ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

ದಿನಾಂಕಃ 09.01.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

6. ಈಗ ಅಭಿಯೋಜನಾ ಪಕ್ಷದವರು ಕಡತದಲ್ಲಿದ್ದ ಸಿ.ಡಿಯನ್ನು ಈಗ ನೋಡುತ್ತಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿರುವ ಕಂಪ್ಯೂಟರಿನಲ್ಲಿ ಪ್ಲೇ ಮಾಡಿ, ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದರಲ್ಲಿರುವ 4 ವೀಡಿಯೋ ಚಿತ್ರೀಕರಣದ ತುಣುಕುಗಳನ್ನು ನೋಡಿ ಗುರುತಿಸಿದ್ದು, ಸದ್ರಿ ಸಿ.ಡಿಯನ್ನು ನಿ.ಪಿ.5 ಅಂತ ಮತ್ತು ಅದರಲ್ಲಿರುವ ನಾಲ್ಕು ದೃಶ್ಯಾವಳಿಗಳನ್ನು ನಿ.ಪಿ.5(ಎ) ಯಿಂದ (ಡಿ) ಎಂದು ಗುರುತಿಸಲಾಯಿತು.

7. ಸದರಿ ವೀಡಿಯೋ ಈ ಪ್ರಕರಣದ ಘಟನಾ ಸ್ಥಳದ್ದಾಗಿದೆ. ಸದ್ರಿ ದೃಶ್ಯಾವಳಿಯಲ್ಲಿ ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಕೆ. ವಕೀಲರಿಂದಃ-**

(ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

ದಿನಾಂಕಃ 18.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಕೆ. ವಕೀಲರಿಂದಃ-**

8. ಕೊರಗಜ್ಜನ ದೈವದ ಕಟ್ಟೆಯ ವಿವಾದ ದೂರು ಕೊಡುವ ಸುಮಾರು ಒಂದೂವರೆ ವರ್ಷದ ಹಿಂದಿನಿಂದಲೂ ಇತ್ತು. ಸದ್ರಿ ವಿವಾದವು ಆರೋಪಿಯ ಸಂಬಂಧಿಕರಾದ ಆರೋಪಿ ಹೆಸರನ್ನೇ ಹೋಲುವ ಹರೀಶ್ ಹಾಗೂ ರಾಜು ಪೂಜಾರಿ ಮತ್ತು ಸಾರ್ವಜನಿಕರ ಮಧ್ಯೆ ಇತ್ತು. ನಾನು ಈ ಹಿಂದೆ ಹರೀಶ್ ಮತ್ತು ರಾಜು ಪೂಜಾರಿಯವರಿಗೆ ಬೆಂಬಲ ನೀಡಿದ್ದೇನೆ. ಕೊರಗಜ್ಜ ದೈವವನ್ನು ಒಂದು ಕಲ್ಲು ಇಟ್ಟು ನಂಬುವುದು ಇದೆ ಎಂದರೆ ಸರಿ.

9. ಸದ್ರಿ ಪ್ರಕರಣದ ವಿವಾದಿತ ಸ್ಥಳದಿಂದ ನನ್ನ ಮನೆ ಒಂದೂವರೆ ಕಿ.ಮೀ ದೂರದಲ್ಲಿದೆ. ನನ್ನ ಮನೆಯಲ್ಲಿ ಕೊರಗಜ್ಜ ದೈವ ಇಲ್ಲ. ಆ ರೀತಿ ನಮ್ಮ ಮನೆಯಲ್ಲಿ ನಾನು ಕೊರಗಜ್ಜದೈವವನ್ನು ನಂಬುತ್ತೇನೆ ಎಂದಾಗ ಬೇರೆ ಯಾರೂ ಆಕ್ಷೇಪಿಸುವುದಿಲ್ಲ. ನಮ್ಮ ಮನೆ 'ಜೈನರಬಾಡಾರು' ಎಂದು ಕರೆಯುತ್ತಾರೆ. ನಮ್ಮ ಜೈನರಬಾಡಾರು ಜಾಗದಲ್ಲಿ ಪಟ್ಟಾ ಜಮೀನಿನ ಜೊತೆ ಕುಮ್ಕಿ ಜಾಗವೂ ಇದೆ. ಆ ರೀತಿ ಸುಮಾರು 3 ಎಕರೆ ಕುಮ್ಕಿ ಜಮೀನು ಇದೆ. ಕುಮ್ಕಿ ಜಮೀನು ಎನ್ನುವುದು ಸರಕಾರಿ ಜಮೀನು ಎಂದರೆ ಸರಿ.

10. ಸದ್ರಿ ಪ್ರಕರಣದ ಆರೋಪಿ ನನಗೆ ಸುಮಾರು 25 ವರ್ಷಗಳಿಂದಲೂ ಪರಿಚಯ ಇದ್ದಾರೆ. ಆರೋಪಿ ಘಟನೆಗಿಂತ ಮೊದಲು ಯಾವ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಘಟನೆ ಕಾಲಕ್ಕೆ ಅವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಸದ್ರಿ ಜೈನರಬಾಡಾರು ಜಾಗವನ್ನು 1991 ರಲ್ಲಿ ನನ್ನ

ತಂದೆಯವರು ಖರೀದಿ ಮಾಡಿರುತ್ತಾರೆ. ಅದಕ್ಕಿಂತ ಪೂರ್ವದಲ್ಲಿ ನಾವು ನಮ್ಮ ತಂದೆ ಮನೆಯಾದ ನಿಟ್ಟಡೆಗುತ್ತು ಎಂಬಲ್ಲಿ ವಾಸ ಮಾಡುತ್ತಿದ್ದೆವು. ಸದ್ರಿ ನಿಟ್ಟಡೆಗುತ್ತು ಜಾಗ ಪ್ರಕರಣದ ವಿವಾದಿತ ಸ್ಥಳದಿಂದ ಸುಮಾರು 8 ಕಿ.ಮೀ. ಅಂತರದಲ್ಲಿದೆ.

11. ನನ್ನ ಮನೆಯಲ್ಲಿ ದೈವ ಇದೆ, ಅದಕ್ಕೆ ಯಾವುದೇ ಟ್ರಸ್ಟ್ ಮಾಡಿಲ್ಲ. ವಿವಾದಿತ ಸ್ಥಳದಲ್ಲಿನ ಕೊರಗಜ್ಜನ ಕಲ್ಲನ್ನು ಒಂದೂವರೆ ವರ್ಷದ ಹಿಂದೆ ಸ್ಥಳಾಂತರ ಮಾಡಿದ್ದಾರೆ ಮತ್ತು ಸದ್ರಿ ಸ್ಥಳಾಂತರದ ವಿಷಯಕ್ಕೆ ಸಂಬಂಧಿಸಿದಂತೆ ಈ ಪ್ರಕರಣ ಆಗಿದೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಪ್ರಕರಣ, ಕೊರಗಜ್ಜನ ಕಲ್ಲನ್ನು ಸ್ಥಳಾಂತರಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಆಗಿದೆ.

12. ಹರೀಶ್ ಮತ್ತು ರಾಜುಪೂಜಾರಿಯವರು ಕೊರಗಜ್ಜ ದೈವವನ್ನು ಪೂಜೆ ಮಾಡುವ ಸಂದರ್ಭದಲ್ಲಿ ನಾನು ಅದಕ್ಕೆ ಹರಕೆ ಕೊಟ್ಟಿದ್ದೇನೆ. ನಾನು ಕೊಟ್ಟಂತಹ ಹರಕೆಯ ಸೊತ್ತುಗಳು ಹರೀಶ್ ಪೂಜಾರಿ ಮತ್ತು ರಾಜು ಪೂಜಾರಿಯವರ ಸ್ವಾಧೀನದಲ್ಲಿದೆ. ಸದ್ರಿ ಸೊತ್ತುಗಳನ್ನು ನಾನು ಮನಪೂರ್ವಕವಾಗಿ ಹರೀಶ್ ಪೂಜಾರಿ ಮತ್ತು ರಾಜು ಪೂಜಾರಿಯವರಿಗೆ ಕೊಟ್ಟಿದ್ದೇನೆ. ಸಾಕ್ಷಿ ಮುಂದುವರಿದು ದೈವದ ನುಡಿಯಂತೆ ನಾನು ಮನಪೂರ್ವಕವಾಗಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ದೈವದ ನುಡಿಯನ್ನು ಹರೀಶ್ ಪೂಜಾರಿ ಮತ್ತು ರಾಜು ಪೂಜಾರಿಯವರು ಆಹ್ವಾನಿಸಿದ್ದಾ ಎಂಬ ಪ್ರಶ್ನೆಗೆ ಸಾಕ್ಷಿ, ನಾನು ಆಗ ಇರಲಿಲ್ಲ, ನಂತರ ನನಗೆ ಅದು ತಿಳಿದು ಬಂತು ಎಂದು ಉತ್ತರಿಸುತ್ತಾರೆ.

13. ನಾನು ಡಿಪ್ಲೊಮಾವರೆಗೆ ವ್ಯಾಸಂಗ ಮಾಡಿದ್ದೇನೆ. ಈ ಪ್ರಕರಣದಲ್ಲಿ ಹೇಳಿದ ಘಟನೆಯ ಪೂರ್ವದಲ್ಲೇ ಕುಟುಂಬದವರು ಟ್ರಸ್ಟ್ ಮಾಡಿಕೊಂಡಿದ್ದಾರೆ. ನೀವೇನಾದರೂ ಟ್ರಸ್ಟ್ ಮಾಡಿಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ, ನಾನು ಮತ್ತು ಸಾರ್ವಜನಿಕರು ಸೇರಿ ಒಂದು ಟ್ರಸ್ಟ್ ಮಾಡಿಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ನಾನು ಹೇಳಿದ ಟ್ರಸ್ಟನ್ನು ಕುಟುಂಬದವರು ಮಾಡಿಕೊಂಡ ಟ್ರಸ್ಟ್ ಗಿಂತ ನಂತರ ಮಾಡಿಕೊಂಡಿದ್ದು. ಆ ರೀತಿ 10 ದಿವಸದ ಅಂತರದಲ್ಲಿ ನಮ್ಮ ಟ್ರಸ್ಟನ್ನು ಮಾಡಿಕೊಂಡಿದ್ದೇವೆ. ನಾವು ಮಾಡಿಕೊಂಡ ಟ್ರಸ್ಟ್ ನ್ನು ನಾನು ಮತ್ತು ನನ್ನ ತಮ್ಮನಾದ ಸಂದೀಪ್ ಹೆಗ್ಡೆ ಯವರು ಸೇರಿ ಮಾಡಿಕೊಂಡಿದ್ದೇವೆ.

14. ಹರೀಶ್ ಮತ್ತು ರಾಜು ಪೂಜಾರಿಯವರ ಬಳಿ ಈ ಕೊರಗಜ್ಜನ ಕಲ್ಲನ್ನು ಯಾರು ಸ್ಥಾಪನೆ ಮಾಡಿದ್ದು ಅಂತ ನಾನೇನು ಕೇಳಿಲ್ಲ. ಕುಟುಂಬದ ಟ್ರಸ್ಟ್ ಸರಿ ಇಲ್ಲ ಅಂತ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ಕುಟುಂಬದ ಟ್ರಸ್ಟಿನ ಅಧ್ಯಕ್ಷರ ಹೆಸರು ಡಾ| ರಾಜೇಶ್ ಬಾಂದಿಲ ಮತ್ತು ಆರೋಪಿ ಸದ್ರಿ ಟ್ರಸ್ಟ್ ನಲ್ಲಿ ಟ್ರಸ್ಟಿಯಾಗಿದ್ದರು. ಕುಟುಂಬದ ಟ್ರಸ್ಟ್ ಊರ್ಜಿತ ಇರುವಾಗ ಇನ್ನೊಂದು ಟ್ರಸ್ಟ್ ಮಾಡಬಹುದಾ ಎನ್ನುವ ಬಗ್ಗೆ ನಾನು ವಕೀಲರಲಿಲ್ಲ ವಿಚಾರಿಸಿದ್ದೇನೆ. ಕೊರಗಜ್ಜನ ಕಲ್ಲನ್ನು ಹರೀಶ್ ಮತ್ತು ರಾಜು ಪೂಜಾರಿಯವರು ಸ್ಥಳದಿಂದ ಕೊಂಡು ಹೋದ ಬಗ್ಗೆ ನನಗೆ ಮಾಹಿತಿ ಇದೆ, ಆ ಬಗ್ಗೆ ನನಗೆ ಒಂದು ಗಂಟೆಯ ಬಳಿಕ ಗೊತ್ತಾಯಿತು. ಅವರು ಕೊರಗಜ್ಜನ ಕಲ್ಲನ್ನು ಮಾತ್ರ ತೆಗೆದುಕೊಂಡು ಹೋಗಿದ್ದಾರೆ, ಬೇರೆ ಏನು ಮಾಡಿಲ್ಲ ಮತ್ತು ನನಗೆ ಅದರ ಮಾಹಿತಿ ಇಲ್ಲ.

15. ನಾವು ಮಾಡಿಕೊಂಡ ಟ್ರಸ್ಟ್ ಗೆ ಅಂಚೆ ವಿಳಾಸ ಇದೆ. ಅದಕ್ಕೆ ಸಂಬಂಧಿಸಿದ ಕಛೇರಿ ಇಲ್ಲ. ವಿವಾದಿತ ಕೊರಗಜ್ಜನ ಕಲ್ಲು ಇದ್ದ ಜಾಗದಲ್ಲಿ ಯಾವುದೇ ಕಟ್ಟಡಗಳು ಇಲ್ಲ. ಸರಕಾರಿ ಜಾಗದಲ್ಲಿ ಯಾವುದಾದರೂ ತಾತ್ಕಾಲಿಕ

ಅಥವಾ ಖಾಯಂ ನಿರ್ಮಾಣ ಮಾಡಬೇಕಾದರೆ ಸರಕಾರದಿಂದ ಅನುಮತಿ ಪಡೆಯಬೇಕು ಎಂದರೆ ಸರಿ.

16. ನಾನು ಟ್ರಸ್ಟಿನ ಅಧ್ಯಕ್ಷ ಅಂತ ಪೊಲೀಸರಿಗೆ ಕೇವಲ ಮೌಖಿಕವಾಗಿ ಹೇಳಿದ್ದಲ್ಲ, ಬದಲಿಗೆ ಟ್ರಸ್ಟ ಡೀಡ್ ದಾಖಲೆಗಳನ್ನು ತೋರಿಸಿರುತ್ತೇನೆ, ಆದರೆ ಅವುಗಳನ್ನು ಹಾಜರುಪಡಿಸಿರುವುದಿಲ್ಲ. ಕುಟುಂಬದ ಟ್ರಸ್ಟಿನ ಪ್ರತಿಯನ್ನು ಸಾರ್ವಜನಿಕ ಸಭೆಯಲ್ಲಿ ನನಗೆ ನೀಡಿರುತ್ತಾರೆ. ಸದ್ರಿ ಕುಟುಂಬದ ಟ್ರಸ್ಟಿನ ಪ್ರತಿಯನ್ನು ನಾನು ಪಡೆದ 10 ದಿನಗಳ ಬಳಿಕ ನಮ್ಮ ಟ್ರಸ್ಟನ್ನು ಮಾಡಿಕೊಂಡಿದ್ದೇವೆ. ನಮ್ಮ ಟ್ರಸ್ಟ ನ್ನು ಮಾಡಿಕೊಳ್ಳಲು ಸರಕಾರದಿಂದ ನಾವು ಅನುಮತಿ ಪಡೆದಿರಲಿಲ್ಲ. ಸದ್ರಿ ಕುಟುಂಬದ ಟ್ರಸ್ಟ ಈಗಲೂ ಊರ್ಜಿತದಲ್ಲಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿ, ಈಗ ಟ್ರಸ್ಟ ಊರ್ಜಿತದಲ್ಲಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಕುಟುಂಬದ ಟ್ರಸ್ಟ ಈಗಲೂ ಊರ್ಜಿತದಲ್ಲಿಲ್ಲ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇವೆ. ಆದೇಶ ಆದ ದಿನಾಂಕ ನೆನಪಿಲ್ಲ. ತಹಶೀಲ್ದಾರರು ಬಂದು ತನಿಖೆ ಮಾಡಿ, ಸರಕಾರಿ ಸ್ಥಳದಲ್ಲಿರುವ ಕುಟುಂಬದ ಟ್ರಸ್ಟ ಊರ್ಜಿತವಲ್ಲ ಎಂದು ಆದೇಶಿಸಿರುತ್ತಾರೆ. ನಾವು ಮಾಡಿಕೊಂಡಿರುವ ಟ್ರಸ್ಟ ಊರ್ಜಿತದಲ್ಲಿದೆ ಅಂತ ತಹಶೀಲ್ದಾರರು ಆದೇಶವನ್ನೇನು ಮಾಡಿಲ್ಲ.

(ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದ.ಕ. ಮಂಗಳೂರು.

ದಿನಾಂಕಃ 22.03.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಕೆ. ವಕೀಲರಿಂದಃ-**

17. ಘಟನೆಯಾಗುವ ಮೊದಲು 6 ತಿಂಗಳ ಮೊದಲೇ ಮೌಖಿಕವಾಗಿ ನಾನು ಅಧ್ಯಕ್ಷ ಎಂದು ಘೋಷಿಸಿಕೊಂಡಿದ್ದೆನು. ಸದ್ರಿ ವಿಷಯವನ್ನು ಘಟನೆಯ ಪೂರ್ವದಲ್ಲಿ ಪೊಲೀಸು ಠಾಣೆಯಲ್ಲಿ ನಾನು ಅಧ್ಯಕ್ಷ ಎಂಬುದನ್ನು ಹೇಳಿದ್ದೇನೆ. ಘಟನೆಯ ಪೂರ್ವದಲ್ಲಿ ನಾನು ಪೊಲೀಸು ಠಾಣೆಗೆ ಹಲವು ಬಾರಿ ಹೋಗಿದ್ದೇನೆ ಎಂದರೆ ಸರಿ. ಘಟನೆಯ ಪೂರ್ವದಲ್ಲಿ ನಾನು ಆರೋಪಿಯ ತಮ್ಮನ ಮೇಲೆ ಹಲವಾರು ಬಾರಿ ದೂರು ಕೊಟ್ಟಿದ್ದೇನೆ, ಅದೇ ರೀತಿ ಆರೋಪಿಯ ತಮ್ಮ ನನ್ನ ಮೇಲೆ ಸಹ ದೂರು ಕೊಟ್ಟಿದ್ದಾರೆ. ಪೊಲೀಸರಿಗೆ ನಾನು ಮೌಖಿಕವಾಗಿ ಅಧ್ಯಕ್ಷ ಅಂತ ಘೋಷಿಸಿಕೊಂಡ ವಿಷಯ ತಿಳಿಸಿಲ್ಲ, ಅಧಿಕೃತವಾಗಿ ದಾಖಲೆಯಾದ ಬಳಿಕ ವಿಷಯ ತಿಳಿಸಿದ್ದೇನೆ.

18. ಆರೋಪಿಯ ತಂದೆ ದೂಜ ಪೂಜಾರಿಯವರು ಬಾಡಾರು ಕುಟುಂಬದ ಹಿರಿಯರು ಎಂದರೆ ಇರಬಹುದು. ಆರೋಪಿಯ ತಂದೆ ಅಧ್ಯಾಪಕರು ಎಂದರೆ ಸರಿ. ಆರೋಪಿಯ ತಂದೆಯ ಮನೆ ಪಕ್ಕದಲ್ಲಿ ಈ ಹಿಂದೆ ಕೊರಗಜ್ಜನ ಕಲ್ಲು ಹಾಕಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ಸರಕಾರಿ ಜಾಗ ಆಗಿತ್ತು ಎಂದು ನುಡಿಯುತ್ತಾರೆ. ಸದ್ರಿ ಜಾಗ ದೂಜ ಪೂಜಾರಿಯವರ ವರ್ಗ ಜಾಗದ ಲಗ್ತಿ ಇರುವ ಜಾಗ ಎಂದರೆ ಸರಿಯಲ್ಲ. ದೂಜ ಪೂಜಾರಿಯವರ ಜಾಗದ ಪಕ್ಕದಲ್ಲಿ ಮೊದಲು ಹಾಕಿದ ಕೊರಗಜ್ಜನ ಕಲ್ಲು ಇತ್ತು. ಸದ್ರಿ ಜಾಗದಲ್ಲಿ ಕೋಲ ಆಗುವ ಸಮಯದಲ್ಲಿ ನೇಮೋತ್ಸವಕ್ಕೆ ನಾನು ಹೋಗಿದ್ದೇನೆ. ಸದ್ರಿ ಜಾಗದ

ಅಕ್ಕಪಕ್ಕದ ಜಾಗದಲ್ಲಿ ಆರೋಪಿಯ ಸಂಬಂಧಿಕರೇ ಇದ್ದಾರೆ ಎಂದರೆ ಸರಿಯಲ್ಲ. ಸದ್ರಿ ಜಮೀನಿನ ಅಕ್ಕಪಕ್ಕ ಯಾವ ಮನೆಯೂ ಇಲ್ಲ. ಸದ್ರಿ ಜಾಗದ ಬಹಳ ಹತ್ತಿರದಲ್ಲಿ ಇರುವ ಮನೆ ಎಂದರೆ 250 ಮೀಟರ್ ಅಂತರದಲ್ಲಿರುವ ಮೋಹನ ಎಂಬುವವರ ಮನೆ ಇದೆ.

19. ಘಟನೆಯಾಗುವ ಪೂರ್ವದಲ್ಲಿ ವಿಜಯಶೇಖರ್ ರವರ ಪರಿಚಯ ನನಗೆ ಇರಲಿಲ್ಲ. ದಿನೇಶ್ ಪೂಜಾರಿಯವರ ಪರಿಚಯ ನನಗೆ ಇದೆ, ಅವರು ಬೆಳ್ತಂಗಡಿ ತಾಲೂಕಿನ ಕುವೆಟ್ಟು ಗ್ರಾಮದವರು ಎಂದರೆ ಸರಿಯಲ್ಲ. ದಿನೇಶ್ ಪೂಜಾರಿಯವರು ಬಜಿರೆ ಗ್ರಾಮದವರು. ಸದ್ರಿ ಸ್ಥಳದಿಂದ ದಿನೇಶ್ ಪೂಜಾರಿಯವರ ಮನೆ 350 ಮೀಟರ್ ಅಂತರದಲ್ಲಿದೆ. ದಿನೇಶ್ ಪೂಜಾರಿ, ವಿಜಯಶೇಖರ ಪೂಜಾರಿ ಮತ್ತು ಮೋಹಾನಂದ ಪೂಜಾರಿಯವರ ಮೇಲೆ ಆರೋಪಿಯ ತಮ್ಮ ಡಾ| ರಾಜೇಶ್ ರವರು ಒ.ಎಸ್.201/2023 ರಂತೆ ಬೆಳ್ತಂಗಡಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಮೇಲೆ ಹೇಳಿದ ಮೂರು ಜನರು ನನಗೆ ಬೆಂಬಲ ಕೊಡುತ್ತಾರೆ.

20. ಕೊರಗಜ್ಜನ ಕಲ್ಲಿನ ಪಕ್ಕದಲ್ಲಿ ಒಂದು ಮರ ಇತ್ತು ಎಂದರೆ ಸರಿ. ಸದ್ರಿ ಮರ ಬಿದ್ದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಸದ್ರಿ ಮರದ ಬುಡದಲ್ಲಿ ಕಲ್ಲು ಇದ್ದದ್ದನ್ನು ನಾನು ನೋಡಿದ್ದೇನೆ. ಕೊನೆಯ ಬಾರಿಗೆ ಸದ್ರಿ ಮರದ ಬುಡದಲ್ಲಿ ಕಲ್ಲು ಇದ್ದದ್ದನ್ನು 15 ವರ್ಷದ ಹಿಂದೆ ನೋಡಿದ್ದೇನೆ. ಮಹಜರು ಕಾಲಕ್ಕೆ ಕೊರಗಜ್ಜನ ಕಲ್ಲಿನ ಪಕ್ಕದಲ್ಲಿದ್ದ ಮರ ಇರಲಿಲ್ಲ.

21. ನಾನು ಕೊರಗಜ್ಜನಿಗೆ ಹರಕೆ ಕೊಡುವ ಸಂದರ್ಭದಲ್ಲಿ ಮೇಗಿನಬಾಡಾರು ಕುಟುಂಬಸ್ಥರು ಹ್ಯಾಂಡ್ ಬಿಲ್ಸ್ ಪ್ರಿಂಟ್ ಮಾಡಿರಲಿಲ್ಲ. ಕೊರಗಜ್ಜನಿಗೆ ಕೋಲ ವರ್ಷದಲ್ಲಿ ಒಂದೇ ಬಾರಿ ಆಗುತ್ತದೆ ಎಂದರೆ ಸರಿ. ನಾನು 2019ರಲ್ಲಿ ಕೊರಗಜ್ಜನಿಗೆ ಹರಕೆ ಕೊಟ್ಟಿದ್ದೇನೆ. ಹರಕೆ ಕೊಡುವ ದಿನ ನಾನು ಸಾಯಂಕಾಲ 5.00 ಗಂಟೆ ಸುಮಾರಿಗೆ ಸದ್ರಿ ಸ್ಥಳಕ್ಕೆ ಹೋಗಿದ್ದೆ ಮತ್ತು ಆ ದಿನ ವಾರ್ಷಿಕ ಕೋಲ ದಿನ ಆಗಿತ್ತು. ಆ ದಿನ ಕೋಲ ನಡೆಸಿದವರು ಅನ್ನ ಸಂತರ್ಪಣೆ ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಅನ್ನ ಸಂತರ್ಪಣೆ ನೀಡಿದ್ದು ಎಂದು ನುಡಿಯುತ್ತಾರೆ. ಅನ್ನಸಂತರ್ಪಣೆ ರಾತ್ರಿ 09.30 ಗಂಟೆಯ ನಂತರ ಆಗಿದೆ. ನಾನು ಸದ್ರಿ ಸ್ಥಳಕ್ಕೆ ಆ ದಿನ ಒಬ್ಬ ಭಕ್ತನಾಗಿ ಹೋಗಿದ್ದೆ. ಕೊರಗಜ್ಜನ ಕಲ್ಲು ಇದ್ದ ಜಾಗದಿಂದ ಆರೋಪಿಯ ಮನೆ 10 ಮೀಟರ್ ಅಂತರದಲ್ಲಿದೆ. ಆರೋಪಿಯ ಮನೆಯಿಂದ ಅವರ ಸಂಬಂಧಿಕರ ಮನೆಗಳು ಎಷ್ಟು ಅಂತರದಲ್ಲಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಹರಕೆ ಕೊಟ್ಟ ದಿನ ಮಧ್ಯಾಹ್ನ 01.00 ಗಂಟೆಗೆ ಅನ್ನ ಸಂತರ್ಪಣೆ ಇತ್ತು ಎಂದರೆ ಸರಿ. ಸದ್ರಿ ದಿನ ರಾತ್ರಿ ನಾನು ಅಲ್ಲಿ ಊಟ ಮಾಡಿದ್ದೇನೆ. ಸದ್ರಿ ದಿನ ಅನ್ನ ಸಂತರ್ಪಣೆ ನನ್ನ ಹೆಸರಿನಲ್ಲಿ ಆಗಿದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಕೋಲದ ಎಲ್ಲಾ ವ್ಯವಸ್ಥೆಗಳನ್ನು ಅನಾದಿ ಕಾಲದಿಂದ ಬಾಡಾರು ಕುಟುಂಬಸ್ಥರು ನಡೆಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

22. ಒ.ಎಸ್.ನಂಬ್ರ 201/2023 ಬಗ್ಗೆ ನನಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹ ಸದ್ರಿ ಮೂರು ಜನ ವ್ಯಕ್ತಿಗಳು ನನಗೆ ಬೆಂಬಲಿಸುವ ಕಾರಣ, ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೊರಗಜ್ಜನ ಕಟ್ಟೆಯ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಉಂಟು. ನಾನು ಹರಕೆ ಕೊಟ್ಟ ದಿನ 2019ರಲ್ಲಿ ಯಾವುದೇ ರೀತಿಯ ಅವ್ಯವಸ್ಥೆ ಆಗಿರಲಿಲ್ಲ. ಆ ನಂತರ ನಾನು ಕೊರಗಜ್ಜನ ಕೋಲಕ್ಕೆ ಹೋಗಿದ್ದೇನೆ. ಅಂತಹ ಕೋಲ ನಡೆಯುವ ಸಂದರ್ಭದಲ್ಲಿ ಯಾವುದೇ ಅವ್ಯವಸ್ಥೆ ಆಗಿಲ್ಲ. ಅಲ್ಲಿ ಕೋಲ ಮಾಡಿಸುವ ಸಮಯದಲ್ಲಿ ಸದ್ರಿ ಕುಟುಂಬಸ್ಥರು ಹೊರಗಿನವರಿಂದ ಹಣವನ್ನು ತೆಗೆದುಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಭಕ್ತರು ಕುಟುಂಬದವರಿಗೆ ಅವರು ಕೇಳದಿದ್ದರೂ ಸಹ ಹರಕೆಯ ರೂಪದಲ್ಲಿ ವಂತಿಗೆ/ದೇಣಿಗೆ ಕೊಡುತ್ತಿದ್ದರು. ಯಾರಿಂದಾದರೂ ಒತ್ತಾಯ ಪೂರ್ವಕವಾಗಿ ಹಣ ಪಡೆದಿದ್ದು ಇಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.